O.S.No.:15/2003
D.W.:2

ಈ ದಿನ ದಿಃ10.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಹೆಚ್.ಎಲ್.ಎ ರವರಿಂದಃ-**

1. ನನ್ನ ತಂದೆಯ ಹೆಸರು ದೇವೇಗೌಡ. ನಿಮ್ಮ ತಂದೆಯವರ ಕಾಲದಿಂದಲ್ಲೂ ಹಳ್ಳಿಯಲ್ಲಿ ಜನರ ಮದ್ಯ ಭಿನ್ನಾಭಿಪ್ರಾಯ ಬಂದರೆ ನ್ಯಾಯಾಪಂಚಾಯಿತಿಗೆ ಹೋಗುತ್ತಿದ್ದರು ಎಂದರೆ ಸರಿ. ನಾನು ಯಾವುದೇ ನ್ಯಾಯಾಪಂಚಾಯಿತಿಯಲ್ಲಿ ಭಾಗವಹಿಸಿಲ್ಲ. ನ್ಯಾಯಾಲಯದಲ್ಲಿ ಪ್ರಕರಣದಲ್ಲಿ ಬಂದು ಸಾಕ್ಷಿ ಹೇಳಲು ನೀವು ಯಾರಾದರೂ ಬಂದು ಕೇಳಿದರೆ ಬಂದು ಸಾಕ್ಷಿ ಹೇಳುತ್ತೀರಿ ಎಂದರೆ ಸಾಕ್ಷಿಯು ಗೊತ್ತಿದ್ದರೆ ಮಾತ್ರ ಹೇಳುತ್ತೇನೆ ಎಂದು ನುಡಿಯುತ್ತಾರೆ. ಈ ನ್ಯಾಯಾಲಯದಲ್ಲಿ ನಮ್ಮ ಗ್ರಾಮದ ಇನ್ನೊಂದು ಪ್ರಕರಣದಲ್ಲಿ ಸಾಕ್ಷಿಯಾಗಿ ಬಂದಿರುವುದಾಗಿ ಸಾಕ್ಷಿಯು ನುಡಿಯುತ್ತಾರೆ. ನಮ್ಮ ಗ್ರಾಮದಲ್ಲಿ ಜನಸಂಖ್ಯೆ ಎಷ್ಟು ಎಂದು ತಿಳಿದುಕೊಂಡಿರುವುದಿಲ್ಲ. ನಿಮ್ಮ ಊರಿನಲ್ಲಿ ಯಾರ ಯಾರ ಮನೆಯಲ್ಲಿ ಏನು ಏನು ನಡೆಯುತ್ತಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ಈ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯ ಅಕ್ಕಪಕ್ಕದಲ್ಲಿ ನಿಮ್ಮ ಮನೆ

ಇದೆಯಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನನ್ನ ಮನೆಯ ನಂಬರ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಭಜಂತ್ರಿ ಜನಾಂಗಕ್ಕೆ ಸೇರಿದ್ದು, ನಾನು ಒಕ್ಕಲಿಗ ಜನಾಂಗಕ್ಕೆ ಸೇರಿರುತ್ತೇನೆ. ಈ ದಾವೆಯನ್ನು ಯಾವ ಪರಿಹಾರ ಕೇಳಿ ಸಲ್ಲಿಸಿರುತ್ತಾರೆಂದು ಗೊತ್ತಿದಿಯಾ ಎಂದರೆ ಸಾಕ್ಷಿಯು ಕಿರಣ್ ಎಂಬುವವರು ನಮ್ಮ ತಂದೆಗೆ ಭಾಗ ಕೊಟ್ಟಿಲ್ಲ ಎಂದು ತಮ್ಮ ಚಿಕ್ಕಪ್ಪನ ವಿರುದ್ದ ದಾವೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹಾಕುವ ವೇಳೆಯಲ್ಲಿ ವಾದಿಗಳು ಹುಣಸಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು. ವಾದಿಗಳ ತಂದೆ ಆ ಸಮಯದಲ್ಲಿ ಹುಣಸನಹಳ್ಳಿ ಮತ್ತು ಗೌಡನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು. ಹುಣಸನಹಳ್ಳಿ ಗ್ರಾಮಕ್ಕೆ ವಾದಿಯು ಹೋಗಿ 40ವರ್ಷಗಳಾಗಿರುತ್ತದೆ.

3. 1ನೇ ಪ್ರತಿವಾದಿಯ ಹೆಸರು ಮಾಸ್ತಯ್ಯ. ವಾದಪತ್ರವನ್ನು ಓದಿರುತ್ತೇನೆ. ಅದರಲ್ಲಿ 1ನೇ ಪ್ರತಿವಾದಿ ಲಕ್ಷ್ಮಮ್ಮ ಆಗಿರುತ್ತಾರೆ. ಈ ದಾವೆಯಲ್ಲಿ 1ನೇ ಪ್ರತಿವಾದಿ ವೆಂಕಟೇಶ್ ಎಂದರೆ ಸರಿ. ಕಿರಣ್ ರವರ ತಂದೆ ವೆಂಕಟೇಶ್ ಆಗಿರುತ್ತಾರೆ ಎಂದರೆ ಸರಿ. ಅವರು ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡು 10ವರ್ಷ ಆಗಿರುತ್ತದೆ, ಯಾವ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ವೆಂಕಟೇಶ್ ರವರ ಹೆಂಡತಿಯ ಹೆಸರು ಚಿಕ್ಕತಾಯಮ್ಮ ಆಗಿರುತ್ತದೆ. ನಿಮಗೆ ವೆಂಕಟೇಶ್ ರವರ ಹೆಂಡತಿ ಹೆಸರು ಗೊತ್ತಿಲ್ಲ, ಅವರ ಹೆಸರು ಜಯಮ್ಮ ಎಂದರೆ

ಸಾಕ್ಷಿಯು ನಾವು ಕರೆಯುತ್ತಿದ್ದದ್ದು ಚಿಕ್ಕತಾಯಮ್ಮ ಎಂದು ನುಡಿಯುತ್ತಾರೆ. ಸದರಿ ವೆಂಕಟೇಶ್ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು ಒಬ್ಬಳೆ ಮಗಳು ಎಂದು ನುಡಿಯುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ಅವರ ಮಗಳು ಬದಕಿರುತ್ತಾರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ವೆಂಕಟೇಶ್ ರವರ ಮಗಳು ಹುಣಸನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ.

04. ಯಾರ ಹೇಳಿಕೆಯ ಮೇರಗೆ ಪ್ರಮಾಣ ಪತ್ರವನ್ನು ಹಾಕಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ವಕೀಲರ ಹೇಳಿಕೆಯ ಮೇರೆಗೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ವೆಂಕಟೇಶ್ ರವರ ಮಗಳು ಬದುಕಿರುವುದಾಗಿ ಹೇಳಿರುತ್ತೇನೆ. ನನಗೆ ವೆಂಕಟೇಶ್ ರವರ ಕುಟುಂಬದ ಬಗ್ಗೆ ವೈಯಕ್ತಿಕವಾಗಿ ಮಾಹಿತಿ ಇದೆ. ವೆಂಕಟೇಶ್ ರವರ ಮಗಳು ತೀರಿಕೊಂಡಿರುತ್ತಾರೆ, ನಿಮಗೆ ಅವರ ಕುಟುಂಬದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಹುಣಸನಹಳ್ಳಿ ಗ್ರಾಮಕ್ಕೆ ವೆಂಕಟೇಶ್ ರವರು ಹೋಗಿ ಸೇರಿಕೊಂಡ ಮೇಲೆ ಅವರ ಕುಟುಂಬದ ಬಗ್ಗೆ ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ.

05. ದಾವಾಸ್ತಿಗಳು ಮೂಲತಃ ಯಾರಿಗೆ ಸೇರಿದ್ದು ಎಂದು ನಿಮ್ಮ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಿ ಎಂದರೆ ಸಾಕ್ಷಿಯು ಮಾದಮ್ಮ ರವರಿಂದ ತಿಮ್ಮಯ್ಯನಿಗೆ ಬಂದಿರುವುದಾಗಿ ನುಡಿಯುತ್ತಾರೆ. ಮಾಸ್ತಯ್ಯನ ಮಗ ಕಾಳಯ್ಯ ಯಾರು ಎಂದರೆ

2ನೇ ಪ್ರತಿವಾದಿಯ ತಾತ ಎಂದು ನುಡಿಯುತ್ತಾರೆ. ಸದರಿ ಮಾಸ್ತಯ್ಯ ವಾದಿ ಮತ್ತು ಪ್ರತಿವಾದಿಗಳಿಗೆ ತಾತ ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ನಿಮ್ಮ ಪ್ರಮಾಣ ಪತ್ರದಲ್ಲಿ ಸದರಿ ಕಾಳಯ್ಯ ರವರು ಪ್ರತಿವಾದಿಗಳ ಅಂಕಲ್ ಆಗಿರುತ್ತಾರೆ ಎಂದು ಬರೆಸಿರುತ್ತೀರಿ ಎಂದರೆ ಸರಿ.

06. ಮಾಸ್ತಯ್ಯನಿಗೆ ಇಬ್ಬರು ಗಂಡು ಮಕ್ಕಳಿದ್ದು, ಅವರುಗಳೆಂದರೆ ಕಾಳಯ್ಯ ಮತ್ತು ತಿಮ್ಮಯ್ಯ ಆಗಿರುತ್ತಾರೆ. ತಿಮ್ಮಯ್ಯ ರವರಿಗೆ ಇಬ್ಬರು ಹೆಂಡತಿಯರು. ಅವರುಗಳೆಂದರೆ ಬೆಟ್ಟಮ್ಮ ಮತ್ತು ಲಕ್ಷ್ಮಮ್ಮ ಎಂದು ಇರುತ್ತಾರೆ. ವ್ಯವಸ್ಥಾ ಪತ್ರದಲ್ಲಿ ತಿಮ್ಮಯ್ಯನಿಗೆ ಇಬ್ಬರು ಹೆಂಡತಿಯರು ಎಂದು ಓದಿರುವುದಾಗಿ ನುಡಿಯುತ್ತಾರೆ. ತಿಮ್ಮಯ್ಯ ರವರ ಮೊದಲನೇ ಹೆಂಡತಿಗೆ ಕಾಳಯ್ಯ ಎಂಬ ಒಬ್ಬ ಮಗ, ಎರಡನೇ ಹೆಂಡತಿಗೆ ತಿಮ್ಮಯ್ಯ ಉಃ ಪ್ಯಾತಯ್ಯ ಎನ್ನುವ ಮಗ ಇರುತ್ತಾರೆ. ಸದರಿ ವಿಷಯವನ್ನು ನಿಮ್ಮ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ವೆಂಕಟೇಶ್ ಮತ್ತು ಮಾಸ್ತಯ್ಯ ಯಾರ ಮಕ್ಕಳು ಎಂದರೆ ಸಾಕ್ಷಿಯು ಪ್ಯಾತಯ್ಯನ ಮಕ್ಕಳು ಎಂದು ನುಡಿಯುತ್ತಾರೆ. ಮಾಸ್ತಯ್ಯನ ಮೊದಲನೇ ಮಗನ ಹೆಸರು ವೆಂಕಟೇಶ್, ಎರಡನೇ ಮಗ ಮಾಸ್ತಯ್ಯ ಎಂದು ನುಡಿಯುತ್ತಾರೆ. ಮಾಸ್ತಯ್ಯನ ಹೆಂಡತಿಯ ಹೆಸರು ಭಾಗ್ಯ ಎಂದು ನುಡಿಯುತ್ತಾರೆ. ಆದೇ ರೀತಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಾಗಿ ನುಡಿಯುತ್ತಾರೆ.

07. ಭಾಗ್ಯ ರವರಿಗೆ ಮೂರು ಜನ ಹೆಣ್ಣು ಮಕ್ಕಳು. ಕಾಳಯ್ಯನ ಹೆಂಡತಿಯ ಹೆಸರು ಮಾದಮ್ಮ ಎಂದು ನುಡಿಯುತ್ತಾರೆ. ಕಾಳಯ್ಯ ಮತ್ತು ಮಾದಮ್ಮ ರವರಿಗೆ ನಾಲ್ಕು ಮಕ್ಕಳು ಇರುತ್ತಾರೆ. ಅವರುಗಳೆಂದರೆ ಮಾಸ್ತಯ್ಯ, ವೆಂಕಟೇಶ್, ಗೋವಿಂದ ಮತ್ತು ನಾಗರಾಜು ಎಂದು ಇರುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ಕಾಳಯ್ಯ ಮತ್ತು ಮಾದಮ್ಮ ರವರಿಗೆ ಮಕ್ಕಳು ಇಲ್ಲ ಎಂದು ಬರೆಸಿ ಹಾಕಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಕಾಳಯ್ಯ ಮತ್ತು ಮಾದಮ್ಮ ರವರು ತಿಮ್ಮಯ್ಯ ಉಃ ಪ್ಯಾತಯ್ಯ ರವರನ್ನು ದತ್ತು ಮಾಡಿಕೊಂಡಿರುತ್ತಾರೆ. ವ್ಯವಸ್ಥ ಪತ್ರ ನೋಡಿರುತ್ತೇನೆ, ದತ್ತು ಪತ್ರ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

08. ದಾವೆ ಹಾಕುವ ಪೂರ್ವದಲ್ಲಿ ದಾವಾಸ್ವತ್ತು ಮಾದಮ್ಮ ಮತ್ತು ಕಾಳಯ್ಯ ರವರಿಗೆ ಸೇರಿದ ಸ್ವತ್ತುಗಳಾಗಿರುತ್ತವೆ. ದಾವಾಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಸರ್ವೆ ನಂಬರ್ ವಿಸ್ತೀರ್ಣ ಗೊತ್ತಾ ಎಂದರೆ ಸಾಕ್ಷಿಯು ಸರ್ವೆ ನಂಬರ್ ಗೊತ್ತು ಎಂದು ನುಡಿಯುತ್ತಾರೆ. ತಿಮ್ಮಯ್ಯನ ಭಾಗದ ಸ್ವತ್ತಿಗೆ ಈ ದಾವೆ ಹಾಕಿರುವುದಾಗಿ ನುಡಿಯುತ್ತಾರೆ. ದಾವಾ ಸರ್ವೆ ನಂ.47ರಲ್ಲಿ 2ಎಕರೆ 25 ಗುಂಟೆ, ಸರ್ವೆ ನಂ.188ರಲ್ಲಿ 1ಎಕರೆ 24 ಗುಂಟೆ, ಸರ್ವೆ ನಂ.193ರಲ್ಲಿ 3ಎಕರೆ 13 ಗುಂಟೆ ಜಮೀನು ಇರುತ್ತದೆ. ಸದರಿ ಸ್ವತ್ತುಗಳು ಒಂದೇ ಕಡೆ ಇರುತ್ತದೆ. ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ನಿಂಗೇಗೌಡ ಮತ್ತು

ಮುತ್ತೇಗೌಡ ರವರ ಜಮೀನು, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಮಾಸ್ತಯ್ಯನ ಜಮೀನು ಹಾಗೂ ದಕ್ಷಿಣಕ್ಕೆ ಹಳ್ಳ ಮತ್ತು ನಮ್ಮ ಜಮೀನು ಬರುತ್ತವೆ. ಸದರಿ ಸರ್ವೆ ನಂಬರ್ ಗಳನ್ನು ಹೊರತುಪಡಿಸಿ ಬೇರೆ ಯಾವ ಸ್ವತ್ತಿನ ಸಂಬಂಧ ದಾವೆ ಹೂಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಈ ದಾವೆಯನ್ನು ಈ ಸರ್ವೆ ನಂಬರ್ ಹೊರತುಪಡಿಸಿ ಬೇರೆ ಯಾವ ಸರ್ವೆ ನಂಬರ್ ಗೆ ಹೂಡಿರುತ್ತಾರೆಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ.

09. ನಿಮ್ಮ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ವಾಸವಾಗಿರುತ್ತಾರೆ ಎಂದು ಹೇಳಿರುತ್ತೀರಿ, ಒಟ್ಟು ಕುಟುಂಬದಲ್ಲಿ ಯಾರು ಯಾರು ಎಂದರೆ ಸಾಕ್ಷಿಯು ಅವರ ತಾಯಿ ಮತ್ತು ತಂಗಿಯರು ಇರುತ್ತಾರೆ ಎಂದು ನುಡಿಯುತ್ತಾರೆ. ಎಲ್ಲಿಯವರೆಗೂ ವಾಸ ಮಾಡಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕ ಹೇಳಲು ಬರುವುದಿಲ್ಲ10-12ವರ್ಷಗಳಿಂದ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಮತ್ತು 2ನೇ ಪ್ರತಿವಾದಿ ಸ್ವಂತ ಅಣ್ಣತಮ್ಮಂದಿರು ಎಂದರೆ ಸರಿ. ವೆಂಕಟೇಶಯ್ಯ ಮತ್ತು ಮಾಸ್ತಯ್ಯ ರವರ ನಡುವೆ ದಾವಾಸ್ವತ್ತಿನ ಸಂಬಂಧ ವಿಭಾಗ ಆಗಿತ್ತಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಯಾವ ಸಾಲಿನಲ್ಲಿ ಎಂದು ಗೊತ್ತಿಲ್ಲ, 40ವರ್ಷಗಳ ಹಿಂದೆಯೇ ಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ಬಾಯಿ ಮಾತಿನ ಮೂಲಕ ವಿಭಾಗ ಆಗಿರುತ್ತದೆ, ಬರವಣಿಗೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಮೂರು ಸರ್ವೆ ನಂಬರ್

ಗಳಲ್ಲಿ 1ನೇ ಪ್ರತಿವಾದಿ ಮತ್ತು 2ನೇ ಪ್ರತಿವಾದಿಗೆ ಸಮನಾಗಿ ಭಾಗ ಬಂದಿರುವುದಾಗಿ ಎಂದು ನುಡಿಯುತ್ತಾರೆ. ಭಾಗ ಆದ ಬಳಿಕ ರೆವಿನ್ಯೂ ದಾಖಲೆಗಳು ಅವರವರ ಹೆಸರಿಗೆ ಮಾಡಿಸಿಕೊಂಡಿರುತ್ತಾರಾ ಎಂದರೆ ಸಾಕ್ಷಿಯು ಭಾಗ ಆದ 7-8 ವರ್ಷಗಳ ಬಳಿಕ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಬಂದಿರುವುದಿಲ್ಲ, 2ನೇ ಪ್ರತಿವಾದಿಯ ಹೆಸರಿನಲ್ಲಿಯೇ ಪಹಣಿ ಬಂದಿರುವುದಾಗಿ ಸಾಕ್ಷಿ ನುಡಿಯುತ್ತಾರೆ.

10. 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ಹಕ್ಕುನಿವೃತ್ತಿ ಪತ್ರ ಬರೆದುಕೊಟ್ಟು ತನ್ನ ಕುಟುಂಬದ ಜೊತೆ ಬೇರೆ ವಾಸವಾಗಿರುತ್ತಾರೆ. ಹಕ್ಕುನಿವೃತ್ತಿ ಪತ್ರವನ್ನು ಯಾವ ಸಾಲಿನಲ್ಲಿ ಬರೆದುಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಹಕ್ಕುನಿವೃತ್ತಿ ಪತ್ರದ ದಿನಾಂಕ, ತಿಂಗಳು ಮತ್ತು ವರ್ಷ ನೆನಪಿಲ್ಲ. ಹಕ್ಕು ನಿವೃತ್ತಿ ಪತ್ರವನ್ನು ನೋಡಿರುತ್ತೇನೆ. ಎಷ್ಟು ಎಕರೆ ಸಂಬಂಧ ಹಕ್ಕು ನಿವೃತ್ತಿ ಬರೆದುಕೊಂಡಿರುತ್ತಾರೆಂದು ತಿಳಿದುಕೊಂಡಿರುವುದಿಲ್ಲ. ಸರ್ವೆ ನಂ.47ರಲ್ಲಿ 1ಎಕರೆ ಸಂಬಂಧ ಹಕ್ಕುನಿವೃತ್ತಿ ಪತ್ರ ಬರೆದುಕೊಟ್ಟಿರುತ್ತಾರೆ. ಸರ್ವೆ ನಂ.188ರಲ್ಲಿ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ಸದರಿ ಹಕ್ಕು ನಿವೃತ್ತಿ ಪತ್ರ ನೋಂದಣಿಗೊಂಡಿರುತ್ತದೆ. ಹಕ್ಕು ನಿವೃತ್ತಿ ಪತ್ರವನ್ನು ಯಾರು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಹಕ್ಕು ನಿವೃತ್ತಿ ಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಹಿಮನಹಳ್ಳಿಯ ಚಿಕ್ಕಯ್ಯ, ಹೊನ್ನೇಗೌಡ,

ಪುಟ್ಟಸ್ವಾಮಿಗೌಡ, ಕರಿಯಪ್ಪ ರವರು ಸಹಿ ಮಾಡಿರುತ್ತಾರೆ. ನಾನು ಸದರಿ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ಹಕ್ಕುನಿವೃತ್ತಿ ಪತ್ರಕ್ಕೆ 1 ಮತ್ತು 2ನೇ ಪ್ರತಿವಾದಿಗಳು ಹೆಬ್ಬೆಟ್ಟು ಹಾಕಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ವಿನಯ್ ವಿಠಲ್ ಕುಂದಾಪುರ)**
**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**